ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**# 17, "ವಾರ್ತಾಸೌಧ", ಭಗವಾನ್ ಮಹಾವೀರ ರಸ್ತೆ, ಬೆಂಗಳೂರು 560 001. ದೂರವಾಣಿ 080-22028052 / ಫ್ಯಾಕ್ಸ್ 22863794**

ಸಂ: **ID804S250000074** ದಿನಾಂಕ: **29/08/2025**

**ಚಿತ್ರೀಕರಣಕ್ಕೆ ಅನುಮತಿ ಪತ್ರ**

ವಿಷಯ: **ಚಿತ್ರೀಕರಣಕ್ಕೆ ಅನುಮತಿ ನೀಡುವ ಬಗ್ಗೆ**

ಉಲ್ಲೇಖ: 1: ಸರ್ಕಾರದ ಆದೇಶ ಸಂ: ಕಸಂವಾಪ್ರ 40 ಪಿಐಎಫ್ 2010, ದಿ 19-03-2011.

2: ತಮ್ಮ ಸಂಸ್ಥೆಯ ಮನವಿ ಪತ್ರ ದಿನಾಂಕ: **29/08/2025**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (2) ರ ಪತ್ರದಲ್ಲಿ ಕೋರಿರುವಂತೆ **KARABHARI MOTIONS CO OPERATIVE FILM CHAMBER ASSOCATION** ಸಂಸ್ಥೆಯಿಂದ ಕೈಗೊಳ್ಳುತ್ತಿರುವ **THE REVENGE** ಚಿತ್ರೀಕರಣವನ್ನು ಕೆಳಕಂಡ ಷರತ್ತಿಗೊಳಪಟ್ಟು ಅನುಮತಿ ನೀಡಲಾಗಿದೆ.

**ಷರತ್ತುಗಳು:**

1: ಈ ಅನುಮತಿಯು ನಿರ್ಬಂಧಿತ ಪ್ರದೇಶಗಳಿಗೆ ಅನ್ವಯವಾಗುವುದಿಲ್ಲ. ಆಯಾಯಾ ಇಲಾಖೆಗಳ ರಕ್ಷಿತ ಪ್ರದೇಶ / ರಕ್ಷಿತ ಅರಣ್ಯ / ವನ್ಯಜೀವಿ ಪ್ರದೇಶ / ನಿರ್ಬಂಧಿತ ಪ್ರದೇಶಗಳಲ್ಲಿ ಚಲನಚಿತ್ರದ ಚಿತ್ರೀಕರಣಕ್ಕೆ ನಿರ್ಬಂಧ ವಿಧಿಸಿದ್ದಲ್ಲಿ ಅದನ್ನು ಪಾಲಿಸತಕ್ಕದ್ದು.

2: ಈ ಅನುಮತಿಯು ಏರಿಯಲ್ ಶಾಟ್ (Ariel Shot)ಗಳಿಗೆ ಅನ್ವಯವಾಗುವುದಿಲ್ಲ. ಏರಿಯಲ್ ಶಾಟ್ (Ariel Shot)ಗಳ ಚಿತ್ರೀಕರಣಕ್ಕೆ ಸಂಬಂಧಪಟ್ಟ ಪೊಲೀಸ್ ಇಲಾಖೆಯಿಂದ ಪೂರ್ವಾನುಮತಿ ಪಡೆದುಕೊಳ್ಳತಕ್ಕದ್ದು.

3: ಭದ್ರತಾ ದೃಷ್ಟಿಯಿಂದ ಪ್ರವೇಶ ನಿರ್ಬಂಧಿಸಲ್ಪಟ್ಟ ಯಾವುದೇ ಪ್ರದೇಶಗಳ ಸ್ಥಳ ನಿರ್ದೇಶನವನ್ನು ಸೂಚಿಸುವಂತೆ ಚಿತ್ರೀಕರಣ ಮಾಡಕೂಡದು.

4: ಚಿತ್ರೀಕರಣ ಸ್ಥಳದಲ್ಲಿ ಸಾರ್ವಜನಿಕ ಆಸ್ತಿಗೆ ಯಾವುದೇ ರೀತಿಯ ಧಕ್ಕೆ ಆಗದಂತೆ ಎಚ್ಚರಿಕೆ ವಹಿಸತಕ್ಕದ್ದು. ಕಾನೂನು ಸುವ್ಯವಸ್ಥೆ ಪಾಲನೆಗಾಗಿ ಸ್ಥಳೀಯ ಪೊಲೀಸ್ ಅಧಿಕಾರಿಗಳಿಗೆ ಮುಂಚಿತವಾಗಿ ತಿಳಿಸಿ, ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಿಕೊಳ್ಳಬೇಕು.

5: ತಾತ್ಕಾಲಿಕವಾಗಿ ಯಾವುದೇ ಕಟ್ಟಡ, ವಿನ್ಯಾಸಗಳನ್ನು ಸ್ಥಳೀಯ ಅಧಿಕಾರಿಯ ಅನುಮತಿಯೊಂದಿಗೆ ನಿರ್ಮಿಸಿದ್ದಲ್ಲಿ ಚಿತ್ರೀಕರಣ ಮುಗಿದ ಕೂಡಲೇ ಅವುಗಳನ್ನು ತೆರವುಗೊಳಿಸಬೇಕು ಇಲ್ಲವೇ ಅವುಗಳನ್ನು ತೆರವುಗೊಳಿಸಲು ತಗಲುವ ವೆಚ್ಚವನ್ನು ಭರಿಸಬೇಕು.

6: ಚಿತ್ರೀಕರಣ ಸ್ಥಳದಲ್ಲಿ ಸಂಭವಿಸಬಹುದಾದ ಸ್ವಾಭಾವಿಕ, ನೈಸರ್ಗಿಕ ಅನಾನುಕೂಲತೆಗಳು, ಅಪಘಾತಗಳು ಮತ್ತು ಇವುಗಳಿಂದ ಆಗುವ ಕಷ್ಟ - ನಷ್ಟಗಳಿಗೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಹೊಣೆಯಾಗುವುದಿಲ್ಲ.

7: ಚಿತ್ರೀಕರಣಕ್ಕೆ 24 ಗಂಟೆ ಮುಂಚಿತವಾಗಿ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು. ಅಲ್ಲದೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಪಡೆದ ಅನುಮತಿ ಪತ್ರವನ್ನು ಕೇಳಿದಾಗ ಸ್ಥಳದಲ್ಲಿಯೇ ತೋರಿಸಬೇಕು.

8: ಏಕಗವಾಕ್ಷಿ ಚಿತ್ರೀಕರಣ ಅನುಮತಿ ವ್ಯವಸ್ಥೆಯಡಿ ಇತರೆ ಇಲಾಖೆಗಳ ಮುಖ್ಯಸ್ಥರು, ನಿಗಮ, ಮಂಡಳಿಗಳು, ಜಿಲ್ಲಾಧಿಕಾರಿಗಳು ಮುಂತಾದವರು ಪ್ರತ್ಯೇಕವಾಗಿ ಚಿತ್ರೀಕರಣ ಶುಲ್ಕ ವಿಧಿಸುವುದಕ್ಕೆ ಅವಕಾಶ ಇರುವುದಿಲ್ಲ. ಆದರೆ ಚಿತ್ರೀಕರಣ ಸ್ಥಳದ ವಾಸ್ತವಿಕ ನಿರ್ವಹಣೆ ಮತ್ತು ಸ್ವಚ್ಛತಾ ಶುಲ್ಕ ವಿಧಿಸಲು ಅವಕಾಶ ಕಲ್ಪಿಸಲಾಗಿದೆ.

9: ಕರೋನಾ ಸಾಂಕ್ರಾಮಿಕ ರೋಗ ತಡೆಗಟ್ಟುವ ಕಾರ್ಯವಿಧಾನದ (S.O.P.) ಸಂಬಂಧ ಭಾರತ ಸರ್ಕಾರದ ವಾರ್ತಾ ಮತ್ತು ಪ್ರಸಾರ ಸಚಿವಾಲಯ ದಿ: 21-08-2020 ರಂದು ಹೊರಡಿಸಿರುವ ಮಾರ್ಗಸೂಚಿಗಳನ್ನು ಮತ್ತು ಅನುಬಂಧ 1 ರಲ್ಲಿ ಲಗತ್ತಿಸಿರುವ ಮಾರ್ಗಸೂಚಿ ಕ್ರಮಗಳನ್ನು ಪಾಲಿಸುವ ಷರತ್ತಿಗೊಳಪಟ್ಟು ಚಿತ್ರೀಕರಣಕ್ಕೆ ಅವಕಾಶ ನೀಡಲಾಗಿದೆ ಹಾಗೂ ಚಿತ್ರೀಕರಣ ಸ್ಥಳದಲ್ಲಿ ಚಿತ್ರೀಕರಣಕ್ಕೆ ಅಗತ್ಯವಿರುವ ಕನಿಷ್ಠ ಸಂಖ್ಯೆಯ ಪಾತ್ರವರ್ಗದವರು ಹಾಗೂ ಸಿಬ್ಬಂದಿ ಉಪಸ್ಥಿತರಿರುವಂತೆ ಮುನ್ನೆಚ್ಚರಿಕೆ ವಹಿಸಬೇಕು. SOP ಪಾಲಿಸುವ ಸಂಬಂಧ ಚಿತ್ರೀಕರಣ ಸ್ಥಳದಲ್ಲಿ ಸರ್ಕಾರದ ಯಾವುದೇ ಅಧಿಕೃತ ಅಧಿಕಾರಿ ಮಾಹಿತಿ ಬಯಸಿದಲ್ಲಿ ಅಥವಾ ತಪಾಸಣೆ ನಡೆಸಲು ಇಚ್ಛಿಸಿದಲ್ಲಿ ಅಗತ್ಯ ಸಹಕಾರ ನೀಡಬೇಕು. (ಪ್ರತಿ ಲಗತ್ತಿಸಿದೆ)

| ಚಿತ್ರೀಕರಣ ನಡೆಯುವ ದಿನಾಂಕಗಳು | ಚಿತ್ರೀಕರಣ ನಡೆಸುವ ಸ್ಥಳಗಳ ವಿವರಗಳು |
|---|---|
| **"From date 30/08/2025 To date 01/08/2026, 342 (in days)"**<br><br>**(ಹಗಲು -ರಾತ್ರಿ)** | KARNATAKA STATE |

Signature Not Verified

Digitally signed by Signer Name
Date: 2025.09.23 11:14:53 IST

Manjunath D Dollin